## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಪ್ರೌಢ ಮತ್ತು ಮಾಧ್ಯಮಿಕ ಶಾಲೆಗಳ ಚಿತ್ರಕಲಾ ವಿಭಾಗಕ್ಕೆ ನಿಗಧಿಪಡಿಸಿರುವ ಮೊತ್ತವನ್ನು ಒಪ್ಪಿಸುವ ಬಗ್ಗೆ.

ಓದಲಾಗಿದೆ :- ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ: ಚಿತ್ರ ಕಲಾ-ಇತರೆ-2:96-97, ದಿನಾಂಕ: 6-9-1996.

oOoo

ಪ್ರಸ್ತಾವನೆ :-

ಸರ್ಕಾರಿ : ಅನುದಾನಿತ : ಅನುದಾನ ರಹಿತ ಪ್ರೌಢಶಾಲೆಗಳಲ್ಲಿ ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಚಿತ್ರಕಲೆಯನ್ನು ಅಳವಡಿಸಿದ್ದು, ಚಿತ್ರಕಲಾ ಪಠ್ಯವಸ್ತುಗಳ ಖರೀದಿಗಾಗಿ ಪ್ರತಿ ವಿದ್ಯಾರ್ಥಿಯಿಂದ ವಾರ್ಷಿಕವಾಗಿ ಪಡೆಯುತ್ತಿರುವ ಚಿತ್ರಕಲಾ ಶುಲ್ಕವನ್ನು 1980ರಲ್ಲಿ 3.00 ರೂ.ಗಳಿಗೆ ನಿಗದಿಪಡಿಸಿದ್ದು, ಇತ್ತೀಚಿನ ವರ್ಷಗಳಲ್ಲಿ ಲೇಖನ ಸಾಮಗ್ರಿ, ಬಣ್ಣ, ಇತ್ಯಾದಿಗಳ ಬೆಲೆ ಹೆಚ್ಚಾಗಿದ್ದು, ಈಗಿರುವ ದರದಲ್ಲಿಯೇ ಈ ವೆಚ್ಚವನ್ನು ಭರಿಸಲು ಸಾಧ್ಯವಿಲ್ಲವೆಂದು ತಿಳಿಸಿ, ಸದರಿ ಶುಲ್ಕವನ್ನು ರೂ.3.00ರಿಂದ 10.00ರೂ.ಗಳಿಗೆ ಹೆಚ್ಚಿಸಿ ಪರಿಷ್ಕೃತ ಆದೇಶ ಹೊರಡಿಸುವಂತೆ ಮೇಲೆ ಓದಲಾದ ಪತ್ರದಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರು ಪ್ರಸ್ತಾವನೆ ಸಲ್ಲಿಸಿದ್ದಾರೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 185 ಎಸ್‌ಇಎಸ್ 96, ಬೆಂಗಳೂರು, ದಿನಾಂಕ: 29-11-1996**

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿದೆ. ಅದರಂತೆ, ಈಗಿರುವ ಚಿತ್ರಕಲಾ ಶುಲ್ಕವನ್ನು ರೂ.3.00ರಿಂದ 10.00ರೂ.ಗಳಿಗೆ ಹೆಚ್ಚಿಸಲು ಮತ್ತು ಸದರಿ ಹಣವನ್ನು ಈ ಕೆಳಕಂಡಂತೆ ವಿನಿಯೋಗಿಸಲು ಮಂಜೂರಾತಿ ನೀಡಿದೆ.

| ಖರ್ಚಿನ ವಿವರ | ಉಪಯೋಗಿಸಬಹುದಾದ ಶೇಖಡಾ ಮೊತ್ತ |
|---|---|
| 1) ಡ್ರಾಯಿಂಗ್ ಪೇಪರ್, ಪೆನ್ಸಿಲ್, ಬಣ್ಣಗಳು, ಬ್ರಷ್‌ಗಳು, ಇತರೆ ಡ್ರಾಯಿಂಗ್ ಸಾಮಗ್ರಿಗಳಿಗಾಗಿ | ಶೇ.60 |
| 2) ಚಿತ್ರಕಲಾ ಪುಸ್ತಕಗಳ ಖರೀದಿಗಾಗಿ | ಶೇ.10 |
| 3) ಶಾಲಾ ಹಂತದಲ್ಲಿ ಚಿತ್ರಕಲಾ ಚಟುವಟಿಕೆಗಳಿಗಾಗಿ (ಪ್ರದರ್ಶನ, ಪ್ರಾತ್ಯಕ್ಷಿಕ, ಸ್ಪರ್ಧೆ, ಇತ್ಯಾದಿ) | ಶೇ.10 |
| 4) ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸುವ ಸಲುವಾಗಿ ಸಾರ್ವಜನಿಕ ಶಿಕ್ಷಣ ಇಲಾಖಾ ಆಯುಕ್ತರ ಕಛೇರಿಗೆ ನೋಂದಣಿ ಶುಲ್ಕ ಪಾವತಿಸುವ ಸಲುವಾಗಿ | ಶೇ.20 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,
(ಸಹಿ)-
(ಆರ್.ನಾರಾಯಣ್)
ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ.

ಕರ್ನಾಟಕ ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಬೆಂಗಳೂರು-1

ಸಂಖ್ಯೆ: ಚಿತ್ರಕಲೆ 1(1)-ಇತರೆ-2:96-97

ದಿನಾಂಕ: 28ನೇ ಜನವರಿ, 1998

**ಜ್ಞಾಪನಾ**

ಸದರಿ ಸರ್ಕಾರಿ ಆದೇಶಗಳು ...

ಶಿಕ್ಷಣ ಶುಲ್ಕವನ್ನು ವಸೂಲಿ ಮಾಡಲು ತಿಳಿಸುತ್ತಾ, ಶೇಖಡಾ 20ರಷ್ಟು ಹಣವನ್ನು ಸಹಾಯಕ ನಿರ್ದೇಶಕರು, ಚಿತ್ರಕಲೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1, ಈ ವಿಳಾಸಕ್ಕೆ ಅಂಚೆಯ ಮೂಲಕ ಯಾವುದಾದರೂ ಒಂದು ರಾಷ್ಟ್ರೀಕೃತ ಬ್ಯಾಂಕಿನಿಂದ ಬ್ಯಾಂಕ್ ಹುಂಡಿ(ಚೆಕ್ ಅಥವಾ ಡಿಮಾಂಡ್ ಡ್ರಾಫ್ಟ್) ಅನ್ನು ಪಡೆದು ಈ ಕಛೇರಿಗೆ ಕಳುಹಿಸಿಕೊಡಲು ತಿಳಿಸುತ್ತಾ, ಸದರಿ ವಿಚಾರವನ್ನು ನಿಮ್ಮ ವ್ಯಾಪ್ತಿಯೊಳಗೆ ಬರುವ ಎಲ್ಲಾ ಪ್ರೌಢ ಶಾಲೆಗಳ ಮುಖ್ಯೋಪಾಧ್ಯಾಯರುಗಳಿಗೆ ತಿಳಿಸುತ್ತಾ, ಮೇಲಿನಂತೆ ಕ್ರಮಕೈಗೊಳ್ಳಲು ತಿಳಿಸಿದೆ. ಬೇಡಿಕೆ ಹುಂಡಿ (ಚೆಕ್ ಅಥವಾ ಡಿಮಾಂಡ್ ಡ್ರಾಫ್ಟ್) ಅನ್ನು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಮತ್ತು ಸಹಾಯಕ ನಿರ್ದೇಶಕರು, ಚಿತ್ರಕಲೆ, ಈ ಹೆಸರಿಗೆ ತೆಗೆಯಬೇಕಾಗುತ್ತದೆ.

ಈ ಸುತ್ತೋಲೆಯನ್ನು ಜ್ಞಾಪನ ಸಂಖ್ಯೆ:ಚಿತ್ರಕಲೆ1(1)—ಇತರೆ—2:96—97, ದಿನಾಂಕ:1?-1—1997 ರಲ್ಲಿ ವರ್ಷದ ಆರಂಭದಲ್ಲಿಯೇ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕಳುಹಿಸಿದ್ದರೂ, ಕೆಲವು ಶಾಲೆಗಳಿಗೆ ಈ ಸುತ್ತೋಲೆ ತಲುಪಿಲ್ಲವೆಂದು ದೂರು ಬಂದಿರುವ ಕಾರಣ, ಈ ಸುತ್ತೋಲೆಯನ್ನು ಅತಿಜರೂರಾಗಿ ಎಲ್ಲಾ ಸಂಸ್ಥೆಗಳಿಗೆ ಕಳುಹಿಸಿಕೊಡಲು ಮತ್ತು ಈ ಬಗ್ಗೆ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲಾ ಕಾಲೇಜುಗಳ ಮುಖ್ಯಸ್ಥರಿಗೆ ಸೂಕ್ತ ಕ್ರಮಕೈಗೊಳ್ಳಲು ಮತ್ತು ಎಲ್ಲಾ ವಿದ್ಯಾರ್ಥಿಗಳಿಂದಲೂ ಶುಲ್ಕವನ್ನು ವಸೂಲಿ ಮಾಡಿ [illegible] ಕ್ರಮ ತೆಗೆದುಕೊಳ್ಳಲು ಈ ಮೂಲಕ ತಿಳಿಸಿದೆ. ಈ ವಿಷಯವನ್ನು 'ಅತಿಜರೂರು' ಎಂದು ಪರಿಗಣಿಸಲು ತಿಳಿಸಲಾಗಿದೆ. ಈಗ ಕಳುಹಿಸಿರುವ ಜ್ಞಾಪನಕ್ಕೂ ಕ್ರಮ ತೆಗೆದುಕೊಳ್ಳದಿದ್ದಲ್ಲಿ, ತಮ್ಮನ್ನೇ ಜವಾಬ್ದಾರರನ್ನಾಗಿ ಮಾಡಿ, ಶಿಸ್ತಿನ ಕ್ರಮ ತೆಗೆದುಕೊಳ್ಳುವ ಜೊತೆಗೆ ತಮ್ಮ ಹೆಸರನ್ನು ಆಯುಕ್ತರ ಗಮನಕ್ಕೆ ತರಲಾಗುವುದು.

ಆಯುಕ್ತರ ಪರವಾಗಿ.

<u>ಪ್ರತಿಗಳನ್ನು</u> :—

(1) ಆಯುಕ್ತರ ಆಪ್ತ ಶಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು;
(2) ನಿರ್ದೇಶಕರು(ಪ್ರೌಢ ಶಿಕ್ಷಣ); ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ಬೆಂಗಳೂರು.
(3) ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು : ಮೈಸೂರು : ಗುಲ್ಬರ್ಗಾ :ಬೆಳಗಾಂ
(4) ರಾಜ್ಯದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರುಗಳಿಗೆ;
(5) ರಾಜ್ಯದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ;
(6) ಕಛೇರಿ ಪ್ರತಿ.

ಟಿಎಸ್‌ವಿ:ಬಹುಪ್ರತಿಗಳು:28011998.